ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1832

ಸದಸ್ಯರ ಹೆಸರು : ಶ್ರೀ ಎಸ್ ನಾಗರಾಜ್

ಉತ್ತರಿಸುವ ಸಚಿವರು : ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 24.03.2020

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ನಂಜನಗೂಡು ನಗರದಲ್ಲಿ ಸಸ್ಯಕಾಶಿ ನಿರ್ಮಾಣಕ್ಕಾಗಿ ಗುರುತಿಸಿರುವ ಜಾಗದ ವಿಸ್ತೀರ್ಣ ಎಷ್ಟು; ಈ ಜಾಗವನ್ನು ತೋಟಗಾರಿಕೆ ಇಲಾಖೆ ವಶಕ್ಕೆ ಪಡೆದು ಸಸ್ಯಕಾಶಿಗೆ ನೀಲನಕ್ಷೆಯನ್ನು ಸಿದ್ಧಪಡಿಸಲಾಗಿದೆಯೇ; (ವಿವರಗಳನ್ನು ಒದಗಿಸುವುದು) | ನಂಜನಗೂಡು ನಗರದಲ್ಲಿ ಸಸ್ಯಕಾಶಿ ನಿರ್ಮಾಣಕ್ಕಾಗಿ ಗುರುತಿಸಿರುವ ಜಾಗದ ವಿಸ್ತೀರ್ಣ 19.23 ಎಕರೆಗಳು.<br>ಹೌದು, ಈ ಜಾಗವನ್ನು ತೋಟಗಾರಿಕೆ ಇಲಾಖೆ ವಶಕ್ಕೆ ಪಡೆದು ಸಸ್ಯಕಾಶಿಗೆ ನೀಲನಕ್ಷೆಯನ್ನು ಸಿದ್ಧಪಡಿಸಲಾಗಿದೆ. ವಿವರಗಳು ಕೆಳಕಂಡಂತಿರುತ್ತವೆ.<br>• ಸಸ್ಯಕಾಶಿಯ ಅಭಿವೃದ್ಧಿಗಾಗಿ ಲೋಕೋಪಯೋಗಿ ಇಲಾಖೆ ವತಿಯಿಂದ ಸಿವಿಲ್ ಕಾಮಗಾರಿಗಳಿಗೆ ರೂ.1486.00 ಲಕ್ಷಗಳು ಮತ್ತು<br>• ಭೂದೃಶ್ಯ ಕಾಮಗಾರಿಗಳಿಗೆ ತೋಟಗಾರಿಕೆ ಇಲಾಖೆವತಿಯಿಂದ ರೂ.900.00 ಲಕ್ಷಗಳು ಒಟ್ಟು ರೂ.2386.00 ಲಕ್ಷಗಳಿಗೆ ಅಂದಾಜುಪಟ್ಟಿ ಸಿದ್ಧಪಡಿಸಲಾಗಿದೆ. |
| ಆ | ಈ ಸಸ್ಯಕಾಶಿ ನಿರ್ಮಾಣದ ಅಂದಾಜು ವೆಚ್ಚ ಎಷ್ಟು; ಪ್ರಸ್ತುತ ಬಿಡುಗಡೆಯಾಗಿರುವ ಅನುದಾನ ಎಷ್ಟು; ಯಾವ ಯಾವ ಮೂಲದಿಂದ ಅನುದಾನಗಳು ಬಂದಿವೆ; ಯಾವ ಯಾವ ಕಾಮಗಾರಿಗಳನ್ನು ಆರಂಭಿಸಲಾಗಿದೆ; ಕೂಡಲೇ ನೀಲಿನಕ್ಷೆಗೆ ಅನುಗುಣವಾಗಿ ಸಸ್ಯಕಾಶಿಯನ್ನು ನಿರ್ಮಿಸಿ ನಿರ್ಮಲ ಸ್ವಚ್ಛ ಪರಿಸರವನ್ನು ಕಲ್ಪಿಸಲು ಸರ್ಕಾರವು ಕೂಡಲೇ ಜರುಗಿಸುವುದೇ? | ಈ ಸಸ್ಯಕಾಶಿಯ ನಿರ್ಮಾಣದ ಅಂದಾಜು ವೆಚ್ಚ ರೂ.2386.00 ಲಕ್ಷಗಳು.<br>ಪ್ರಸ್ತುತ ರೂ.300.00 ಲಕ್ಷಗಳು ಬಿಡುಗಡೆಯಾಗಿರುತ್ತದೆ.<br>ತೋಟಗಾರಿಕೆ ಇಲಾಖೆಯ ಯೋಜನಾಂಶ ಕಾರ್ಯಕ್ರಮದಡಿ ಈ ಅನುದಾನ ಬಂದಿದೆ.<br>**ಕೆಳಕಂಡ ಕಾಮಗಾರಿಗಳನ್ನು ಆರಂಭಿಸಲಾಗಿದೆ.**<br>• ಉದ್ಯಾನವನ್ನು ಸ್ವಚ್ಛ ಮಾಡಿ ಪ್ರದೇಶವನ್ನು ಸಮತಟ್ಟು ಮಾಡಲಾಗಿದೆ.<br>• ನೀರಾವರಿ ಸಂಪರ್ಕ ಕಲ್ಪಿಸಲಾಗಿದೆ.<br>• ಎಲೆ ಮತ್ತು ಪೊದೆ ಜಾತಿ ಗಿಡಗಳನ್ನು ನೆಡಲಾಗಿದೆ.<br>• ಎಕ್ವಾಟಿಕ್ ಗಿಡಗಳನ್ನು ನೆಡಲಾಗಿದೆ.<br>• ವಿವಿಧ ಮರ ಜಾತಿ ಗಿಡಗಳನ್ನು ನೆಡಲಾಗಿದೆ.<br>• ಹುಲ್ಲುಹಾಸು ಅಭಿವೃದ್ಧಿ ಪಡಿಸಲಾಗಿದೆ.<br>• ಟೋಪಿಯರಿ ಗಿಡಗಳನ್ನು ನೆಡಲಾಗಿದೆ.<br>• ಸಸ್ಯಕಾಶಿಯ ಮುಂಭಾಗ, ಎಡ ಮತ್ತು ಬಲಭಾಗಕ್ಕೆ ಎಂ.ಎಸ್ ಗ್ರಿಲ್ ಕಾಂಪೌಂಡ್ ಗೋಡೆ ನಿರ್ಮಾಣ ಪ್ರಗತಿಯಲ್ಲಿದೆ.<br>• ವಿದ್ಯುತ್ ಸಂಪರ್ಕ ಮತ್ತು ದೀಪಾಲಂಕಾರ ಪ್ರಗತಿಯಲ್ಲಿದೆ.<br>• ಪಾತ್ ವೇ ನಿರ್ಮಾಣ ಮತ್ತು ಬೆಂಚುಗಳು ಅಳವಡಿಕೆ ಪ್ರಗತಿಯಲ್ಲಿದೆ.<br>• ಕಾವಲುಗಾರರ ಕೊಠಡಿ ಮತ್ತು ಸಂಗ್ರಹಣಾ ಕೊಠಡಿ ನಿರ್ಮಾಣ ಪ್ರಗತಿಯಲ್ಲಿದೆ<br>• ಉದ್ಯಾನವನ ನಿರ್ವಹಣೆ ಕಾರ್ಯ ಮಾಡಲಾಗುತ್ತಿದೆ.<br><br>ಹೌದು, ಅನುದಾನ ಲಭ್ಯತೆಯನ್ನು ಆಧರಿಸಿ ಕ್ರಮಕೈಗೊಳ್ಳಲಾಗುವುದು. |

HORTI 182 HGM 2020

(ನಾರಾಯಣ ಗೌಡ)

ಪೌರಾಡಳಿತ, ತೋಟಗಾರಿಕೆ ರೇಷ್ಮೆ ಸಚಿವರು.